# ಬಣ್ಣದ ಉಡುಗೆಯಲ್ಲಿ ಕನ್ನಡ ಕಲರವ

**ರಾಜ್ಯೋತ್ಸವ ಸಂಭ್ರಮಕ್ಕೆ ಫ್ಯಾಷನ್ ಸಾಥಿ ನೀಡುತ್ತಿದೆ. ಕೆಂಪು–ಹಳದಿ ಬಣ್ಣಗಳ ಉಡುಗೆ ಕನ್ನಡ ಹಬ್ಬವನ್ನು ಮತ್ತಷ್ಟು ಕಳೆಕಟ್ಟುವಂತೆ ಮಾಡುತ್ತದೆ. ಉಡುಪಿಗೆ ಒಪ್ಪುವ ಒಡವೆ ಫ್ಯಾಷನ್ ಲೋಕದಲ್ಲಿ ಸಖತ್ತಾಗಿ ಸದ್ದು ಮಾಡುತ್ತಿದೆ.**

**■ ಉಮಾ ಅನಂತ್**

ಕನ್ನಡ ಬಾವುಟದಲ್ಲಿರುವ ಕೆಂಪು ಹಳದಿ ಬಣ್ಣ ಉಡುಪುಗಳಲ್ಲಿ ಒಡಮೂಡಿದರೆ ಕನ್ನಡದ ಕಂಪನ್ನು ಫ್ಯಾಷನ್ ಮೂಲಕ ಸಾಕಾರಗೊಳಿಸಿದಂತಾಗುತ್ತದೆ. ಈ ಎರಡೂ ಬಣ್ಣಗಳು ಸಮೃದ್ಧಿಯ ಸಂಕೇತ. ಪ್ರೀತಿಯ ಗುರುತು. ನವೆಂಬರ್ ಒಂದರಂದು ನಡೆಯುವ ಕನ್ನಡ ರಾಜ್ಯೋತ್ಸವ, ಜೊತೆಗೆ ಇಡೀ ಮಾಸದಲ್ಲಿ ನಡೆಯುವ ರಾಜ್ಯೋತ್ಸವ ಸಂಭ್ರಮಾಚರಣೆಗೆ ಉಡುಪಿನ ಫ್ಯಾಷನ್ ಉತ್ತಮ ಸಾಥಿ ನೀಡುತ್ತದೆ.

ಸೀರೆ, ಲೆಹೆಂಗಾ, ಲಂಗ ದಾವಣಿ, ಗಾಗ್ರಾಗಳಲ್ಲಿ, ಮಕ್ಕಳ ಫ್ರಾಕ್, ಮಿನಿಸ್ಕರ್ಟ್‌ಗಳಲ್ಲಿ ಕನ್ನಡ ಕಲರವ ಅನುರಣಿಸಿದರೆ ಅದೆಷ್ಟು ಸೊಗಸು! ಮಕ್ಕಳಿಗೂ ಕನ್ನಡದ ಬಗ್ಗೆ ಹೆಮ್ಮೆ ಮೂಡುತ್ತದೆ, ಕನ್ನಡ ನಾಡಿನ ಬಗ್ಗೆ ಅಭಿಮಾನ ಮೂಡುತ್ತದೆ, ರಾಜ್ಯೋತ್ಸವ ಎಂಬ ಪರಿಕಲ್ಪನೆ ಮಕ್ಕಳಿಗೆ ಮನನವಾಗುತ್ತದೆ. ಆ ಮೂಲಕ ನಾಡಪ್ರೇಮ ಹೊರ ಹೊಮ್ಮುತ್ತದೆ. ಇದಕ್ಕೆಲ್ಲ 'ಕನ್ನಡ ಫ್ಯಾಷನ್' ಹೊಸ ಭಾಷ್ಯ ಬರೆಯುತ್ತದೆ.

ಹಾಗೆ ನೋಡಿದರೆ ಧಾರ್ಮಿಕ ಹಬ್ಬದಂತೆ ನಾಡಹಬ್ಬ, ರಾಷ್ಟ್ರೀಯ ಹಬ್ಬಗಳಿಗೂ ಫ್ಯಾಷನ್‌ಗೂ ಅನನ್ಯ ನಂಟು ಇದೆ. ಖಾದಿ ಉಡುಗೆ ಗಾಂಧಿ ಜಯಂತಿ ಜೊತೆಗೆ ಬೆಸೆದುಕೊಂಡರೆ, ಕೆಂಪು–ಹಳದಿ ಗಾಢಬಣ್ಣಗಳ ಉಡುಗೆ ರಾಜ್ಯೋತ್ಸವದೊಂದಿಗೆ ತಳುಕು ಹಾಕಿಕೊಂಡಿದೆ. ರಾಜ್ಯೋತ್ಸವ ಎಂದರೆ ಕನ್ನಡ ನುಡಿತೇರು ಎಳೆಯುವ ಸುಸಂದರ್ಭ, ಕನ್ನಡ ಧ್ವಜದಲ್ಲಿ ರಾರಾಜಿಸುವ ಬಣ್ಣಗಳು ಉಡುಪಿನಲ್ಲಿ ವಿಜೃಂಭಿಸಿದರೆ ಫ್ಯಾಷನಬಲ್ ಆಗಿ ಕಾಣುತ್ತದೆ.

'ಕಡು ಹಳದಿ ಹಾಗೂ ಗಾಢ ಕೆಂಪು ಬಣ್ಣಗಳಿಂದ ಕೂಡಿದ ಸೀರೆ, ಹಾಫ್‌ಸಾರಿ, ಸಲ್ವಾರ್, ಫ್ರಾಕ್‌ಗಳು, ಲೆಹೆಂಗಾಗಳು, ಗಾಗ್ರಾ ಚೋಲಿ ಮುಂತಾದ ವೈವಿಧ್ಯಮಯ ಉಡುಪುಗಳ ಥರಾವರಿ ವಿನ್ಯಾಸದಲ್ಲಿ ಮಿಂಚುತ್ತವೆ. ಈ ಎರಡೂ ಬಣ್ಣಗಳ ಕಾಂಬಿನೇಷನ್ ಅತ್ಯಂತ ಮನಮೋಹಕ, ಆಕರ್ಷಕವೂ. ರಾಜ್ಯೋತ್ಸವ

